## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ, ಹಿರಿಯೂರು

**ಸಿ.ಸಿ.ನಂ.13/2023**

ಪಿರ್ಯಾದಿ : ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

ಆರೋಪಿ : ಕೃಷ್ಣಸಾಗರ್ ವಿಶ್ವಂಬರ್ ಕೃಷ್ಣಾತ್<br>ತಂದೆ ಕೃಷ್ಣಸಾಗರ್ ಕೃಷ್ಣಾತ್, 36 ವರ್ಷ,<br>ಎಂ.ಹೆಚ್.45.ಎ.ಎಲ್.6367 ಕಾರು ಚಾಲಕ,<br>ವಾಸಃ ಸೆಂಡೇಚಿಂಚ್ ಗ್ರಾಮ,<br>ಸೊಲ್ಲಾಪುರ, ಮಹರಾಷ್ಟ್ರ.

### ಆಪಾದನೆ

ದಿನಾಂಕ 04.08.2022 ರಂದು ಮುಂಜಾನೆ 5.20 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಆನೇಸಿದ್ರಿ ಗೇಟ್ ಸಮಿಪವಿರುವ ಶ್ರೀ ಶನೇಶ್ವರ ದೇವಸ್ಥಾನದ ಮುಂದಿನ ಹಿರಿಯೂರು – ಬೆಂಗಳೂರು ಎನ್.ಹೆಚ್.4 ರಸ್ತೆಯಲ್ಲಿ ಆರೋಪಿಯಾದ ನೀವು ವಾಹನದ ಚಾಲನಾ ಪರವಾನಗಿ ಇಲ್ಲದೇ ನಿಮ್ಮ ಬಾಬ್ತು ಎಂ.ಹೆಚ್.45.ಎ ಎಲ್.6367 ನೇ ಕಾರನ್ನು ಹಿರಿಯೂರು ಕಡೆಯಿಂದ ಬೆಂಗಳೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಬದಿಯ ಸೇತುವೆಯ ಗೋಡೆಗೆ ಡಿಕ್ಕಿ ಹೊಡೆಸಿದ ಪರಿಣಾಮ ಕಾರು ಜಖಂಗೊಂಡಿದ್ದು ಕಾರಿನಲ್ಲಿದ್ದ ಪಾಂಡುರಂಗ ಕ್ಷೀರಸಾಗರ್ ರವರಿಗೆ ತಲೆಗೆ ಮೈ ಕೈ ಕಾಲುಗಳಿಗೆ ಬಲವಾದ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ಚಾಸಾ.1 ರವರಿಗೆ ತಲೆಗೆ ಮೈ ಕೈ ಕಾಲುಗಳಿಗೆ ಪೆಟ್ಟುಗಳು ಬಿದ್ದು ಸಾಮಾನ್ಯ ಮತ್ತು ತೀವ್ರ ಸ್ವರೂಪದ ಗಾಯಗಳಾಗಿದ್ದು ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ ಕಲಂ 279, 337, 338 ಮತ್ತು 304(ಎ)

ಮತ್ತು ಭಾ.ಮೋ.ವಾ.ಕಾ 3 ರೆ/ವಿ 181 ರಂತೆ ದಂಡಿಸಲ್ಪಡುವ ಅಪರಾಧವೆಸಗಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರ 1. ನಿಮಗೆ ಓದಿ ಹೇಳಿ ಕೇಳಿದ ಆಪಾದನೆ ತಿಳಿಯಿತೇ ?

ಉತ್ತರಃ

ಪ್ರ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

(ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ **30.08.2023**
ಸ್ಥಳಃ ಹಿರಿಯೂರು

(ಮೊಹಮ್ಮದ್ ಮೊಯಿನುದ್ದಿನ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು